

# ಗೆರಟೆಯಲ್ಲಿ ಅರಳಿದ ಕಲೆ!

ತೆಂಗಿನಕಾಯಿ ಚಿಪ್ಪಿನಲ್ಲಿ ಚಿತ್ತಾಕರ್ಷಕ ಕಲೆ ಮಾಡಿ ಗಮನಸೆಳೆಯುತ್ತಿದ್ದಾರೆ ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕು ಇರಾ ಗ್ರಾಮದ ಈ ದಂಪತಿ. ಕಳೆದ ವರ್ಷದ ಲಾಕ್‌ಡೌನ್ ಸಮಯದಲ್ಲಿ ಕೆಲಸವಿಲ್ಲದೆ ಮನೆಯಲ್ಲಿ ಕುಳಿತಿದ್ದಾಗ ಯೂಟ್ಯೂಬ್ ನೋಡಿ ಈ ಚಿಪ್ಪಿನ ಕಲೆ ಕಲಿತ ದಂಪತಿ ಇದೀಗ ಈ ಕಲೆಯಲ್ಲಿ ಸಾಕಷ್ಟು ಪರಿಣತಿ ಸಾಧಿಸಿದ್ದಾರೆ.

■ ಪ. ರಾಮಕೃಷ್ಣಶಾಸ್ತ್ರಿ

ಇವರ ಮನೆಯಂಗಳಕ್ಕೆ ಕಾಲಿಡುವಾಗಲೇ ಮನ ಸೆಳೆಯುವುದು ಚಾವಣಿಯಿಂದ ಕೆಳಗೆ ತೂಗಾಡುತ್ತಿರುವ ಬಣ್ಣ ಬಣ್ಣದ ಹೂಗಳು ಅರಳಿದ ಬಳ್ಳಿಗಳಿರುವ ಪುಟ್ಟ ಪುಟ್ಟ ಚಿತ್ತಾಕರ್ಷಕ ಕುಂಡಗಳು. ಬಳಿಗೆ ಹೋಗಿ ನೋಡಿದರೆ ಈ ಕುಂಡಗಳು ಮಣ್ಣಿನಿಂದ ಸೃಷ್ಟಿಯಾದುದಲ್ಲ ಎಂಬುದು ಸ್ಪಷ್ಟವಾಗುತ್ತದೆ. ಹಾಗಿದ್ದರೆ ಏನಿದು ಕೇಳಿದರೆ ಅದು ತಯಾರಾಗಿರುವುದು ತೆಂಗಿನ ಗೆರಟೆ ಅಥವಾ ಚಿಪ್ಪಿನಿಂದ ಎನ್ನುತ್ತಾರೆ ಮನೆಯೊಡೆಯರಾದ ಸಚೇಂದ್ರ–ಜಯಲಕ್ಷ್ಮಿ ದಂಪತಿ. ಮನೆಯೊಳಗಡಿಯಿಟ್ಟರೆ ಗೆರಟೆಯಿಂದ ಸಿದ್ಧವಾದ ಕಲಾಕೃತಿಗಳ ವೈವಿಧ್ಯಗಳ ಪರಿಚಯವಾಗುತ್ತದೆ.

ಈ ದಂಪತಿ ಬಂಟ್ವಾಳ ತಾಲೂಕಿನ ಇರಾ ಗ್ರಾಮದ ಕುಕ್ಕಾಜೆಯವರು. ಸಚೇಂದ್ರ ಕಟ್ಟಡ ನಿರ್ಮಿಸುವ ಮೇಸ್ತ್ರಿಯಾದರೆ ಜಯಲಕ್ಷ್ಮಿ ದರ್ಜಿಯಾಗಿ ಬಟ್ಟೆ ಹೊಲಿಯುತ್ತಿದ್ದವರು. ಇಬ್ಬರೂ ಕಲೆಯ ಶಿಕ್ಷಣ ಪಡೆದವರಲ್ಲ, ಕಲೆ ವಂಶ ಪರಂಪರಾಗತವೂ ಅಲ್ಲ. ಸಚೇಂದ್ರ ಸಿಮೆಂಟ್ ಕಲೆಯಲ್ಲಿ ತಾವರೆ, ಬಾವಿಕಟ್ಟೆ ಇತ್ಯಾದಿ ತಯಾರಿಸಿದ್ದರೂ ಅದು ಎಲ್ಲರೂ ಮಾಡುವ ಕಲೆ. ಆದರೆ 2020ರ ಕೊರೊನಾ ಹಾವಳಿಯ ಲಾಕ್‌ಡೌನ್ ಸಂದರ್ಭ ಕೆಲಸವಿಲ್ಲದೆ ಕುಳಿತಾಗ ಪರಿಸ್ಥಿತಿ ಅವರನ್ನು ಕಲಾವಿದರಾಗಿ ರೂಪಿಸಿತು. ಏನು ಮಾಡೋಣ ಎಂಬ ಪ್ರಶ್ನೆ ಮುಂದೆ ನಿಂತಿತು. ಅದಕ್ಕೆ ಉತ್ತರವಾದದ್ದು ಇಂದು ತೆಂಗಿನ ಗೆರಟೆಯಿಂದ ಹತ್ತಾರು ವಸ್ತುಗಳನ್ನು ತಯಾರಿಸಬಲ್ಲ ಅವರ ಪ್ರೌಢಿಮೆ. ಅದನ್ನು ಕಲಾ ವಿಮರ್ಶಕರೇ ಬೆರಗುಗಣ್ಣಿನಿಂದ ಪ್ರಶಂಸಿಸಿದ್ದಾರೆ.